

# ಸಂತ್ರಸ್ಥರ ಸಂತೈಯಿಸಿದ ಮಕ್ಕಳು: ಕೂಡಿಟ್ಟ ಹಣದಿಂದ ನೆರವಿನ ಹಸ್ತ

ನಾಡಿನಲ್ಲಿ ನೆರೆ, ಬರ ಎದುರಾದ ಸಂದರ್ಭದಲ್ಲಿ ಶಾಲಾ ಮಕ್ಕಳನ್ನು ಸಂತ್ರಸ್ಥರ ಸಂಕಷ್ಟಕ್ಕೆ ಸ್ಪಂದಿಸಿದ್ದಾರೆ. ಉತ್ತರ ಕರ್ನಾಟಕ, ಕೊಡಗು ಸೇರಿದಂತೆ ಇನ್ನಿತರೆ ಕಡೆಗಳಲ್ಲಿ ಉಂಟಾದ ಪ್ರವಾಹ ಪರಿಸ್ಥಿತಿಯಲ್ಲಿ ಮಕ್ಕಳು, ನೆರೆ ಸಂತ್ರಸ್ತರಿಗೆ ತಮ್ಮ ತನುಮನ ಧನವನ್ನು ಸಮರ್ಪಿಸಿದ್ದಾರೆ. ಮಕ್ಕಳು ತಾವು ಕೂಡಿಟ್ಟ ಹಣದಿಂದ, ಮತ್ತು ತಮ್ಮ ಪೋಷಕ ನೆರವಿನಿಂದ ನೆರೆ ಸಂತ್ರಸ್ತರಿಗೆ ನೆರವಾಗಿದ್ದಾರೆ. ಜಲಪ್ರಳಯದಿಂದ ಕಂಗಲಾದ ಜನರಿಗೆ ಅಗತ್ಯವಾಗಿ ಬೇಕಾದ ದಿನಬಳಕೆಯ ವಸ್ತುಗಳು, ಆಹಾರ ಸಾಮಗ್ರಿ, ಹೊಸ ಬಟ್ಟೆಗಳು, ತಿಂಡಿ ತಿನಿಸುಗಳು ಇತ್ಯಾದಿ ಕೊಂಡು ತಂದು ಸಂತ್ರಸ್ಥರಿಗೆ ನೇರವಾಗಿ ತಲುಪಿಸುವ ವ್ಯವಸ್ಥೆ ಮಾಡಿದ್ದು ಎಲ್ಲೆಡೆ ಮೆಚ್ಚುಗೆಗೆ ಪಾತ್ರವಾಯಿತು. ವಿಶೇಷವಾಗಿ ಸಂತ್ರಸ್ತರ ಮಕ್ಕಳು ಕೂಡ ತಮ್ಮಂತೆ ಓದು ಮುಂದುವರೆಸಲಿಯೆಂದು ನೋಟ್ ಪುಸ್ತಕ, ಪೆನ್ನು ಪೆನ್ಸಿಲ್ ಗಳನ್ನು ಖರೀದಿಸಿ ತಂದು ವಿದ್ಯಾರ್ಜನೆಗೆ ನೆರವಾದರು. ಮಕ್ಕಳ ಈ ಕಾರ್ಯಕ್ಕೆ ಶಾಲಾ ಆಡಳಿತ ಮಂಡಳಿ ಮತ್ತು ಶಿಕ್ಷಕರು ಕೂಡ ಕೈ ಜೋಡಿಸಿದ್ದು ಸಾರ್ಥಕತೆ.




## ಪ್ರಕೃತಿ ಸಂಪದ-ವಿದ್ಯಾರ್ಥಿ ಮಂಥನ



ಮಕ್ಕಳಲ್ಲಿನ ಸುಪ್ತ ಪ್ರತಿಭೆಯನ್ನು ಹೊರಸೆಳೆದು ಬಾಲ್ಯದಲ್ಲಿಯೋ ಪತ್ರಿಕೋದ್ಯಮದ ಬಗ್ಗೆ ಒಲವು ಮೂಡಿಸುವುದರ ಜೊತೆಗೆ ಸಾಹಿತ್ಯಾ ಭಿರುಚಿ ಯನ್ನು ಬೆಳೆಸಿ ಪೋಷಿಸುವ ನಿಟ್ಟಿನಲ್ಲಿ ನಿಸರ್ಗ ವಿದ್ಯಾನಿಕೇತನ-'ಪ್ರಕೃತಿ ಸಂಪದ' ವಿದ್ಯಾರ್ಥಿ ಮಂಥನದ ತ್ರೈಮಾಸಿಕ ಪತ್ರಿಕೆಯನ್ನು ಹೊರತರುತ್ತಿದೆ. ಕಳೆದ 15 ವರ್ಷಗಳಿಂದ ನಿರಂತರವಾಗಿ ಪತ್ರಿಕೆ ಹೊರಬರುತ್ತಿದೆ. ಮೊದಲಗೆ ಕೈ ಬರಹದಿಂದ ಆರಂಭಗೊಂಡ ಪತ್ರಿಕೆ ಕ್ರಮೇಣ ನವೀಕರಣ ಮಾದರಿ ಪುಸ್ತಕ ರೂಪದಲ್ಲಿ ಮಕ್ಕಳ ಬರುತ್ತಿದೆ. ಈ ಪತ್ರಿಕೆಗಾಗಿ ಮಕ್ಕಳ ಸಂಪಾದಕ ಮಂಡಳಿ ಇದ್ದು, ಮಗುವಿನ ಆಂತರ್ಯದಲ್ಲಿ ಅಡಗಿರುವ ಕಲೆಯನ್ನು ಹೊರತರುವಲ್ಲಿ ಪತ್ರಿಕೆ ಮುಂಚೂಣಿಯಲ್ಲಿದೆ. ಪೋಷಕ ವರ್ಗದಿಂದಲೂ ಮೆಚ್ಚುಗೆ ಗಳಿಸಿದೆ.



## ನಿಸರ್ಗ ವಿದ್ಯಾನಿಕೇತನ ಶಾಲೆ

### ಮಾದರಿ ಆಡಳಿತ ಮಂಡಳಿ ಹಾಗೂ ಅತ್ಯುತ್ತಮ ಸೌಲಭ್ಯಗಳು

- ಹಚ್ಚ ಹಸಿರಿನ ನಿಸರ್ಗದ ಮಡಿಲು
- ಶಾಲಾವರಣದಲ್ಲಿ ದಕ್ಷಿಣಾಮೂರ್ತಿ ದೇಗುಲ
- ವಿಶಾಲವಾದ ಸುಸಜ್ಜಿತ ಮೂರು ಮಹಡಿಗಳ ಕಟ್ಟಡ
- ಒಂದೇ ಸೂರಿನಡಿ ಮೂರು ಹಂತದ ತರಗತಿಗಳು
- ಪೂರ್ವ ಪ್ರಾಥಮಿಕ, ಪ್ರಾಥಮಿಕ ಮತ್ತು ಪ್ರೌಢಶಾಲೆ
- ಶಾಲಾವರಣ ಹಸಿರಿನ ನೆಡುತೋಪು-ತಾರಸಿ ಕೈತೋಟ
- ಶಾಲಾ ಕಟ್ಟಡದ ಸುತ್ತಲೂ ಮರಗಿಡಗಳ ಆಸರೆ
- ವಾಹನಗಳ ಓಡಾಟದ ಆರ್ಭಟ; ಜನಜಂಗುಳಿ ಇಲ್ಲ
- ಜನವಸತಿ ಪ್ರದೇಶ – ಪ್ರಶಾಂತ ವಾತಾವರಣ
- ಸಂಗೀತ, ನೃತ್ಯ, ಯೋಗ ತರಬೇತಿ
- ಅನುಭವಿ ಅಧ್ಯಾಪಕರು, ಶಿಕ್ಷಕರು ಮತ್ತು ನುರಿತ ಸಿಬ್ಬಂದಿ
- ಸದಾ ಗಾಳಿ, ಬೆಳಕಿನ ವಿಶಾಲವಾದ ಕೊಠಡಿಗಳು
- ಸ್ಮಾರ್ಟ್ ಕ್ಲಾಸ್, ಆನ್‌ಲೈನ್ ಕ್ಲಾಸ್ ಸೌಲಭ್ಯ
- ವಿಸ್ತಾರವಾದ ಕಂಪ್ಯೂಟರ್ ಲ್ಯಾಬ್,
- ಬೆರುಗು ಮೂಡಿಸುವ ಕಲಾ ಕೇಂದ್ರ
- ಅತ್ಯುನ್ನತ ದರ್ಜೆಯ ವಿಜ್ಞಾನ ಪ್ರಯೋಗಾಲಯ
- ಬಹುವಿಸ್ತಾರದ ಗ್ರಂಥಾಲಯ, ಇ-ಲೈಬ್ರರಿ
- ಒಳಾಂಗಣ-ಹೊರಾಂಗಣ ಕ್ರೀಡಾವರಣ
- ಎನ್‌ಸಿಸಿ, ಸ್ಕೌಟ್ಸ್ ಆಂಡ್ ಗೈಡ್ಸ್, ಸೇವಾದಳ, ರೆಡ್ ಕ್ರಾಸ್
- ತುರ್ತು ಚಿಕಿತ್ಸಾಕೇಂದ್ರ, ವಾಹನ ಸೌಲಭ್ಯ







## ಗುರು ಪೂರ್ಣಿಮೆ ಆಚರಣೆ




'ಮನೆಯೇ ಮೊದಲ ಪಾಠಶಾಲೆ-ತಾಯಿಯೇ ಮೊದಲ ಗುರು'ಎಂಬ ನಾಣ್ನುಡಿಯಂತೆ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗೆ ಉನ್ನತ ಸ್ಥಾನಮಾನವನ್ನು ನೀಡಿದ್ದೇವೆ. ಗುರುವಿನ ಗುಲಾಮನಾಗುವ ತನಕ ದೊರೆಯದಣ ಮುಕುತಿ ಎನ್ನುವಂತೆ ಪ್ರತಿವರ್ಷ ಗುರು ಪೂರ್ಣಿಮಯ ಪುಣ್ಯದಿನದಂದು ಗುರುವಂದನಾ ಕಾರ್ಯಕ್ರಮವನ್ನು ಶಾಲೆಯಲ್ಲಿ ಪ್ರತಿವರ್ಷ ವಿಭಿನ್ನ ಹಾಗೂ ಅರ್ಥಪೂರ್ಣವಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಅಂದು ಮಕ್ಕಳು ತಮ್ಮ ಪೋಷಕರಲ್ಲಿ ಗುರುವನ್ನು ಕಾಣಬೇಕೆಂಬ ಸದಾಶಯದಿಂದ ಶಾಲೆಯಲ್ಲಿ ಗುರುವಂದನಾ ಕಾರ್ಯಕ್ರಮವನ್ನು ಆಯೋಜಿಸಿಕೊಂಡು ಬರುತ್ತಿದ್ದು, ಮಕ್ಕಳ ಪಾಲಿನ ಮೊದಲ ಗುರುವಾದ ಎಲ್ಲಾ ತಾಯಂದಿರರಿಗೆ ಪಾದ ಪೂಜೆಯನ್ನು ಮಾಡಿಸಲಾಯಿತು. ಗುರುವಂದನಾ ಕಾರ್ಯಕ್ರಮಕ್ಕೆ ಅರೋಬಿಂದೋ ಕಪಾಲಿಶಾಸ್ತ್ರಿ ವೇದ ಸಂಸ್ಕೃತಿ ಸಂಸ್ಥೆಯ ಗೌರವ ನಿರ್ದೇಶಕ, ವಿಶ್ವವಿಖ್ಯಾತ ವೇದಬ್ರಹ್ಮ ಪ್ರಶಸ್ತಿ ಪುರಸ್ಕೃತ ಡಾ. ಆರ್.ಎಲ್. ಕಶ್ಯಪ ಮತ್ತು ಸಾಕ್ಷಿ ಪ್ರತಿಷ್ಠಾನದ ವ್ಯವಸ್ಥಾಪಕ ನಿರ್ದೇಶಕ ಡಾ. ರ.ವಿ. ಜಹಾಗೀರದಾರ ಮತ್ತಿತರರು ಸಾಕ್ಷಿಯಾಗಿದ್ದರು.

## ಭಾರತೀಯ ಸೇನಾನಿಗಳಿಂದ ಧ್ವಜಾರೋಹಣ



ಪ್ರತಿವರ್ಷವೂ ಸ್ವಾತಂತ್ರೋತ್ಸವ, ಗಣರಾಜ್ಯೋತ್ಸವ ಸೇರಿದಂತೆ ಎಲ್ಲಾ ರಾಷ್ಟ್ರೀಯ ಹಬ್ಬಗಳನ್ನು ಅತ್ಯಂತ ಸಡಗರ-ಸಂಭ್ರಮದಿಂದ ಆಚರಿಸಲಾಗುತ್ತದೆ. ಪ್ರತಿವರ್ಷವೂ ಸ್ವಾತಂತ್ರೋತ್ಸವದಂದು ಶಾಲೆಗೆ ಸ್ವಾತಂತ್ರ್ಯ ಯೋಧರು, ಭಾರತೀಯ ಸೇನಾ ಕಮಾಂಡರ್ ರನ್ನು ಆಹ್ವಾನಿಸಿ ಅವರಿಂದ ರಾಷ್ಟ್ರ ಧ್ವಜಾರೋಹಣ ಮಾಡಿಸಲಾಗುತ್ತದೆ. 73ನೇ ಸ್ವಾತಂತ್ರೋತ್ಸವದ ವೇಳೆ ಭಾರತೀಯ ವಾಯುಪಡೆ ವಿಂಗ್ ಕಮಾಂಡರ್ ಗೌತಮ್ ಸಲಾರಿಯಾ ಅವರು ರಾಷ್ಟ್ರ ಧ್ವಜಾರೋಹಣ ನೆರವೇರಿಸಿ, ಗೌರವ ವಂದನೆ ಸ್ವೀಕರಿಸಿದರು. ನಂತರ ಸ್ವಾತಂತ್ರ್ಯೋತ್ಸವವ ಅಂಗವಾಗಿ ಆಯೋಜಿಸಿದ್ದ 'ಸ್ವಾತಂತ್ರ್ಯ ಪೂರ್ವ-ಸ್ವಾತಂತ್ರ್ಯ ನಂತರ- ಮುಂದಿನ ಭವ್ಯ ಭಾರತ' ಕುರಿತ ಛಾಯಾಚಿತ್ರ ಪ್ರದರ್ಶನ ಮತ್ತು ಮಾಹಿತಿ ಕೇಂದ್ರವನ್ನು ಉದ್ಘಾಟಿಸಿ, ಮಕ್ಕಳಲ್ಲಿ ಸ್ವಾತಂತ್ರ್ಯದ ಕೆಚ್ಚನ್ನು ಮೂಡಿಸಿದರು.

Phone
080-79634697

Mobile
+91 99728 61912

**Website:** https://nisargavidyanikethana.com
**Email :** nisarga546@gmail.com
**Address:** 15/1 4th Cross, Sampangi Ramaiah Layout, Sidedahalli Road, H.M.R, Bangalore-73